ಹಿಂದೆಂದೂ ಕಾಣದ ಮಶೀನಿನಲ್ಲಿ ಶರೀರವನ್ನು ತೂರಿಸಿದ್ದೇ ತೂರಿಸಿದ್ದು. ಅಂತೂ ಎರಡು ದಿನ ಮುಂಜಾನೆಯಿಂದ ಸಂಜೆಯತನಕ ಇದ್ದೆಲ್ಲ ಮಶೀನುಗಳಲ್ಲಿ ಒಳಹೊಕ್ಕು ಹೊರಬಂದು, ಸಿಕ್ಕ ಎಲ್ಲ ರಿಪೋರ್ಟ್ ಹಿಡಿದುಕೊಂಡು ಡಾಕ್ಟರ ಬಳಿಗೆ ಬಂದಾಯ್ತು.

'ಹೇಗಿದ್ದೀರಮ್ಮ ಈಗ? ಸ್ಕ್ಯಾನಿಂಗ್ ಎಲ್ಲ ಮುಗಿದಮೇಲೆ ಜ್ಯೂಸ್, ಕಾಫಿ, ಟೀ ಏನಾದರೂ ತೆಗೆದುಕೊಂಡಿರಾ?'

'ಹೌದು' ಎಂಬಂತೆ ತಲೆಯಾಡಿಸಿದೆ. ಅವರು ಬಿಡಿಸಿ ಕೇಳಿದರೆ, ಏನು ತೆಗೆದುಕೊಂಡೆ ಎಂದು ಹೇಳಬಹುದಿತ್ತು. ಅವರಿಗೆ ಅಷ್ಟೆಲ್ಲ ವಿವರಣೆ ಬೇಡವೇನೊ, ಚುಟುಕು-ಮೊಟಕು ಉತ್ತರವೇ ಸಾಕಾಗುತ್ತದೆಂದು ಕಾಣಿಸಿತು.

'ಈಗ ಹೇಗೆ ಅನ್ನಿಸ್ತಾ ಇದೆ? ಎದೆಯಲ್ಲಿ ಏನಾದರೂ 'ಚುಳಕ್' ಆಗ್ತಾ ಇದೆಯಾ? ಬಲಭುಜದ ಹತ್ತಿರ ನೋವಿದೆಯಾ? ಎಡ ಮೊಣಕಾಲಿನಲ್ಲಿ ಫ್ಲೂಯಿಡ್ ಕಡಿಮೆಯಾಗಿ ಮೂಳೆ ಸವೆತ ಆರಂಭಿಕ ಹಂತದಲ್ಲಿದೆ. ಹಾಗಾಗಿ ಕಾಲು ಎಳೆದುಕೊಂಡು ನಡೆಯುತ್ತಿದ್ದೀರಿ.'

ಹಿಂದಿನ ದಿನ ಏಳು ತೆಂಗಿನಕಾಯಿ ಸುಲಿದು, ನಾಲ್ಕು ತೆಂಗಿನಕಾಯಿ ಒಡೆದು, ಎಂಟು ಕಡಿಗಳನ್ನು ಅವಿಶ್ರಾಂತವಾಗಿ ತುರಿದಿದ್ದರ ಪರಿಣಾಮ ಬಲ ಭುಜದಲ್ಲಿ ವಿಪರೀತ ನೋವಿತ್ತಾದರೂ, ಅವರು ಪ್ರಶ್ನೆ ಕೇಳಿದ ರೀತಿಗೆ ಈ ಉತ್ತರ ಕೊಡುವುದು ಬೇಡವೆನಿಸಿ, 'ಹೌದು' ಎಂಬಂತೆ ತಲೆಯಾಡಿಸಿದೆ.



'ಅಮ್ಮ, ನೀವು ಬಲು ಗಟ್ಟಿಗಿತ್ತಿ. ಅಷ್ಟು ಸೀರಿಯಸ್ ಆಗಿ ಆಸ್ಪತ್ರೆಗೆ ಬಂದವರು, ಈಗ ನೋಡಿದರೆ ಯಾವುದೋ ಪೇಶಂಟ್ ನೋಡಲು ಬಂದವರಂತೆ ಇದ್ದೀರಲ್ವಾ?'

ಕೇಳಿ ನಗುಬಂತು, ಆದರೆ, ನನ್ನ ನಗುಮುಖ ಅವರಿಗಷ್ಟೇ ಅಲ್ಲ, ನನ್ನ ಮಕ್ಕಳಿಗೂ ಕಾಣಿಸಲಿಲ್ಲ. ಅವರ ಗಮನವೆಲ್ಲ ಎಕ್ಸರೇ ನೋಡುವುದರಲ್ಲೇ ಕೇಂದ್ರೀಕೃತವಾಗಿತ್ತು. 'ಹಾರ್ಟಲ್ಲಿ ಯಾವ ಪ್ರಾಬ್ಲಮ್ ಕಾಣಿಸ್ತಾ ಇಲ್ಲ. ನೀವೂ ನೋವಿಲ್ಲ ಎಂದು ಹೇಳಿದ್ದೀರಲ್ವಾ. ನೀವು ಯಾವ್ಯಾವುದೋ ಮೆಡಿಸಿನ್ ದಿನಾ ಎರಡು ಹೊತ್ತು ತೆಗೆದುಕೊಳ್ತೀರಿ ಅಂತ ನಿಮ್ಮ ಮಕ್ಕಳು ಹೇಳಿದ್ದರು. ಮಧ್ಯಾಹ್ನದವರೆಗೆ ಮನೆಗೆ ಹೋಗಿ ತಂದು ತೋರಿಸಿ ಎಂದಿದ್ದೆ. ಮನೆಯಲ್ಲಿ ಯಾರೂ ಇಲ್ವಾ?'

'ಒಬ್ಬಳು ಕೆಲಸದವಳು ಇದ್ದಾಳೆ. ಅವಳ ಕೈಯಲ್ಲಿರುವ ಮೊಬೈಲ್ ಕಾಲ್‌ಗಷ್ಟೇ ಸೀಮಿತ. ಮೆಡಿಸಿನ್ ನೋಡಿ ಫೋಟೊ ತೆಗೆದು ಕಳಿಸುವುದು ಅವಳಿಂದ ಸಾಧ್ಯವಿಲ್ಲ. ಅವಳ ಕೈಗೆ ಸಿಗುವಲ್ಲಿ ಅಂಥದ್ದು ಏನೂ ಇಟ್ಟಿಲ್ಲ.'

'ಪರವಾಗಿಲ್ಲ, ನೀವು ಇಷ್ಟು ಮಾತಾಡುತ್ತಿದ್ದೀರಿ ಎಂದಮೇಲೆ ನೀವೇ ಹೇಳಿಬಿಡಿ.'

'ಗಂಟುನೋವಿಗೆ ಆಯುರ್ವೇದಿಕ್ ಗುಳಿಗೆ ಮತ್ತು ಕಷಾಯ ಎರಡು ಹೊತ್ತು ತೆಗೆದುಕೊಳ್ತೇನೆ. ಬಿ.ಪಿ.ಗೆ ಬೆಳಗ್ಗೆ ತೆಗೆದುಕೊಳ್ಳಲು ಒಂದು ಮಾತ್ರೆಯಿದೆ. ಮತ್ಯಾವ ತೊಂದರೆಯೂ ಇರಲಿಲ್ಲ, ಬೇರೆ ಯಾವ ಔಷಧಿಯೂ ಇಲ್ಲ.' ಡಾಕ್ಟರ್ 'ಹೂಂ'ಗುಟ್ಟಿದರಾದರೂ, ದೊಡ್ಡ ಮಗ ಮಾತ್ರ ಇಷ್ಟೆಲ್ಲ ವಿವರಣೆ ಬೇಕಿತ್ತಾ ಎಂಬಂತೆ ಗುರಾಯಿಸಿ ನೋಡಿದ.

'ಓಕೇ...ಓಕೇ...' ಎಂದವರು ಮೊದಲಿನ ಎಕ್ಸರೇ ಕೆಳಗಿಟ್ಟು, ತಲೆಬುರುಡೆಯ ಸ್ಕ್ಯಾನಿಂಗ್ ಫೋಟೊ ನೋಡತೊಡಗಿದರು. ಇಬ್ಬರೂ ಮಕ್ಕಳು ಹತ್ತಿರ ಬಂದರು. 'ನಿಮ್ಮಮ್ಮ ಆಲ್‌ಮೋಸ್ಟ್ ಸರಿಯಾಗಿ ಇದ್ದಾರೆ. ಎಲ್ಲಿಯಾದರೂ ಸಣ್ಣ ಪ್ರಮಾಣದಲ್ಲಿ ಬ್ಲಡ್ ಕ್ಲಾಟ್ ಆಗಿ, ಅದು ತಾನಾಗಿಯೇ ನಾರ್ಮಲ್‌ಗೆ ಬಂದಿರಬೇಕು. ಬ್ರೇನ್‌ನಲ್ಲಿ ಕೂಡ ಯಾವ ಸಮಸ್ಯೆ ಕಾಣಿಸ್ತಾ ಇಲ್ಲ. ಆದರೂ ಅವರ